# ಮೌನ ಸೂತಕವೇ?

ಪ್ರಾಚೀನ ವಾಙ್ಮಯದ ಉಪನಿಷತ್ತುಗಳಲ್ಲಿ ಬರುವ ಒಂದು ಮಾರ್ಮಿಕವಾದ ನುಡಿ ಇದು. 'ನಾಯಮಾತ್ಮಾ ಪ್ರವರ್ಚನೇನ ಲಭ್ಯೋ! ನ ಮೇಧಯಾನ ಬಹುನಾಶ್ರುತೇನ!!

ಯಮೇವ ಏಷ ವೃಣುತೇ ತೇನ ಲಭ್ಯಃ! ತಸ್ಯ ಏಷ ಆತ್ಮಾ ವಿವೃಣುತೇ ತನೂಂ ಸ್ವಾಮ್!!

ಇದರರ್ಥ ಹೀಗೆ: ಮಾತಿನ ಬಣ್ಣನೆಗೆ ನಿಲುಕದ ಈ 'ಆತ್ಮ' ಎಂಬುದಿದು. ಮೇಧಾ ಶಕ್ತಿಯಿಂದ ಇದನ್ನು ಬಗೆಯ ಬಹುದೆ? ಎಂದರೆ ಅದಾಗದು. ಬಹು ವಿಚಾರಗಳ ಕೇಳ್ಮೆಯಿಂದ ಇದರ ಹೊಲಬಾದೀತೇ? ಎಂದರೆ ಇದು ಯಾವ ಕೇಳ್ಮೆಗೂ ಒಳಗಾಗದು. ಹಾಗಾದರೆ ಮತ್ತೇನು? ತಾನು ಯಾರಿಗೆ? ಒಲಿದಿದೆಯೋ ಅಂಥ ಜೀವಕ್ಕೆ, ತನ್ನೊಲವಿನ ಜೀವಕ್ಕೆ ಅದು ತನ್ನನ್ನು ತಾನೇ ತೆರೆದು ತೋರುವುದು.

ಉಪನಿಷತ್ತಿನ ಈ ಮಾತಿಗೆ ಹೇಗೆ ಸ್ಪಂದಿಸುವುದು? ಹೇಗೆ ಈ ನುಡಿಯನ್ನು ಬಿಡಿಸುವುದು? ಹೇಗೆ ಈ ಒಳನೋಟಗಳ ಇಂಗಿತವನ್ನು ನಮ್ಮೊಳಗೆ ಬರಮಾಡಿಕೊಂಡು ಎದೆಯಲ್ಲಿ ಇಂಗಿಸಿಕೊಳ್ಳುವುದು? 'ಆತ್ಮ' ಎಂಬ ಪದವಿದೆ ಇಲ್ಲಿ. ಆತ್ಮ ಎಂದರೆ ಎಲ್ಲೆಡೆ ಇರುವುದು, ಪಸರಿಸುವುದು ಎಂದು ಈ ಪದದ ಅರ್ಥ. 'ಆತತ'ವಾಗಿರುವುದು ಆತ್ಮದ ಗುಣ ಅಥವಾ ಸ್ವಭಾವ. ಆತತ ಎಂದರೆ ವಿಸ್ತಾರ. ಹರಡಿರುವಿಕೆ. ಅಂದಾಗ ಆತ್ಮವೆಂದರೆ ಎಲ್ಲೆಡೆ ಒಂದೇ ರೀತಿಯಲ್ಲಿ ಸಮಭಾವದಿಂದ ಇರುವ, ಅಂಥ ಇರುವಿಕೆಯುಳ್ಳ ಒಂದು ತತ್ವ ಎಂಬ ಸೂಚನೆ ದೊರೆಯುತ್ತದೆ. ಇಂಥ ಆತ್ಮವನ್ನು ಮಾತಿನಿಂದ ಬಣ್ಣಿಸಲಾಗದು ಎನ್ನುತ್ತಾನೆ. 'ಪ್ರ–ವಚನ ದಿಂದ ಇದು ಸಿಗದು'. ಆದರೆ ಮಾತಿನಿಂದ ಬಣ್ಣಿಸಲಾಗದು ಎನ್ನುವುದೂ ಒಂದು ಮಾತೇ ಆಗಿದೆಯಲ್ಲವೆ? ಆಗಿದೆ ನಿಜ. ಆದರೆ ತನ್ನ ಬಣ್ಣನೆಯ ಶಕ್ತಿಯನ್ನು ತಾನೇ ನಿರಾಕರಿಸಿಕೊಂಡ ತಣ್ಣನೆಯ ಮಾತಾಗಿದೆ. ತನ್ನ ಮಿತಿಯನ್ನು ಅರಿತ ಮಾತಾಗಿದೆ. ತನ್ನ ಮಿತಿಯನ್ನು ಅರಿಯುವುದೂ ಇನ್ನೊಂದರ ಶಕ್ತಿಯನ್ನು ಅರಿಯುವುದೂ ಈ ಎರಡೂ ಪರಸ್ಪರ ಹತ್ತಿರ ಇವೆ! ಅಂದರೆ, ಅರಿವು ಏಕಕಾಲದಲ್ಲಿ ಇಬ್ಬಗೆಯಾಗಿದೆ! ತನ್ನ ಶಕ್ತಿ ಸೀಮಿತ ಎಂದು ತಿಳಿಯುವುದು ತನ್ನನ್ನು ಮೀರಿದ ಶಕ್ತಿಯೊಂದರ ತಿಳಿವಳಿಕೆಯನ್ನು ಪಡೆಯುವ ದಾರಿಯೂ ಆಗಿದೆ. ಮಾತು ತನ್ನ ಮಿತಿಯನ್ನು ಹೇಳುವಾಗ ಈ ಹೇಳಿಕೆ ತನ್ನನ್ನು ಮೀರಿದ್ದೊಂದರ ಸೂಚನೆಯೂ ಆಗಿ ಮಾರ್ಪಡುತ್ತದೆ. ಮಾತು ತಾನು ಸೋತು ಗೆಲ್ಲುತ್ತದೆ! ಈ ಗೆಲವು ಹೃದ್ಯವಾದದ್ದು. ಇನೊಬ್ಬರನ್ನು ಸೋಲಿಸಿ ತಾನು ಗೆದ್ದು ಬೀಗುವ ಬಗೆ ಬೇರೆ. ತಾನು ಸೋತು ಆ ಸೋಲಿನಲ್ಲಿಯೇ ಗೆಲವೊಂದು ಅಡಗಿರುವುದರ ಸುಳಿವನ್ನು ಕಂಡು ಅಚ್ಚರಿಗೊಳ್ಳುವ ಪರಿಯೇ ಬೇರೆ. ಹೌದು. ಸೋತು ಗೆಲ್ಲುವ ಪರಿಯಲ್ಲಿ ಗೆಲುವೊಂದು ಅಚ್ಚರಿ! ಗೆಲವು ಅಹಂಕಾರವಲ್ಲ. ಎಂಥ ಅಚ್ಚರಿ ಎಂದರೆ, ಆತ್ಮವೂ ತಾನು ಮಾತಿಗೆ ಸಿಗದೇ ಮಾತು ಗೆಲ್ಲಲು ನೆರವಾಗುವ ಅಚ್ಚರಿ! ತನ್ನ ಇರುವಿಕೆಗೆ ಒಂದಿಷ್ಟು ಭಂಗವಾಗದೆ ಆತ್ಮವೂ ಮಾತನ್ನು ಪರೋಕ್ಷವಾಗಿ ಗೆಲ್ಲುವಂತೆ ಮಾಡುವ ಈ ಪರಿಗೆ ವಿಸ್ಮಿತವಾಗಿ ಮಾತು ಮೂಕವಾಗುವುದು! ಮಾತು ಮೂಕವಾಗುವುದು ಮಾತಿನ ಧನ್ಯತೆಯ ಕ್ಷಣವಲ್ಲವೆ!

ಆತ್ಮವು ಎಲ್ಲೆಡೆ ಇದೆ. ಎಲ್ಲೆಡೆ ಇರುವುದು ಮೌನ. ಮಾತಲ್ಲ. ಮೌನಕ್ಕೆ ಕೇಡಿಲ್ಲ. ಕೇಡಿಲ್ಲವೇಕೆಂದರೆ ಮಾತು ಭೋರ್ಗರೆಯುತ್ತಿರುವಾಗಲೂ ಅಲ್ಲೇ ಮೌನವೂ ಇದೆ ಮತ್ತು ಮಾತು ಸೃಷ್ಟಿಸುವ ಯಾವ ತಳಮಳಕ್ಕೂ ತಾನು ಒಳಗಾಗದೇ ಇದೆ. ಅದು ಹಾಗಿರುವುದರಿಂದಲೇ ಮಾತು, ಮಾತು ನಿಲ್ಲಿಸಿ, ಮೌನದಲ್ಲಿ ಸೇರಿ, ಸ್ವಲ್ಪ ಹೊತ್ತು ತನ್ನಲ್ಲಿಯೇ ಬುಸುಗುಡುತ್ತ ಮತ್ತೆ ಮೆಲ್ಲನೆ ಮೌನದ ಕಡಲಲ್ಲಿ ಕರಗಿ ಮೌನದ ನೆಮ್ಮದಿಯನ್ನು ತಾನು ಹೊದ್ದು ಮಲಗುವುದು ಅಥವಾ ಮೌನವು ತನ್ನನ್ನೇ ಮಾತಿಗೆ ಹೊದ್ದಿಸಿ ತನ್ನ ಬಳಿ ಮಲಗಿಸುವುದು. ಮಾತು, ಮೌನಗೊಳ್ಳದೇ ಮಾತಿಗೆ ಬೇರೆ ದಾರಿಯೇ ಇಲ್ಲ. ಅದು ಮೌನದಿಂದಲೇ ಹುಟ್ಟಿತು. ಮೌನದಲ್ಲಿಯೇ ತನ್ನ ಸಾವನ್ನು ಕೂಡ ಅನುಭವಿಸಬೇಕು. ಮಾತು ಹುಟ್ಟಿ– ಸಾಯುವ ದಿನಮಾನದ್ದು. ಸಾಯುವುದಕ್ಕಾಗಿಯೇ ಅದು ಹುಟ್ಟುವುದೇನೋ!

ಆದರೆ ಮೌನ, ಮಾತಿನ ಹುಟ್ಟು– ಸಾವುಗಳೆರಡರಲ್ಲೂ ಮಾತಿನ ಒಡನಾಡಿಯಾಗಿಯೇ ಇದೆ. ಇದ್ದರೂ, ಮೌನಕ್ಕೆ ಸೂತಕವಿಲ್ಲ. 'ಶಬ್ದ ಸೂತಕ' ಎನ್ನುವ ಮಾತನ್ನು ನಮ್ಮ ವಚನಕಾರರು ಬಳಸುವರು. 'ಮೌನ ಸೂತಕ' ವೆಂದಲ್ಲ. ಅವರು 'ವಚನಕಾರ'ರಾಗಿಯೂ 'ಶಬ್ದ ಸೂತಕ'ವೆಂದು ನುಡಿಗಟ್ಟು ಬಳಸುವುದೇ ಅವರು ಉಪನಿಷತ್ಕಾರರಂತೇ ಅನುಭಾವಿಗಳೆನ್ನುವುದನ್ನು ಸೂಚಿಸುತ್ತದೆ. 'ಭಾಷೆ ಕಿರಿದು– ಆಯುಷ್ಯ ಹಿರಿದು' ಎನ್ನುವನು ಅಲ್ಲಮಪ್ರಭು. ಆಯುಷ್ಯವು ಅಂದರೆ ಬದುಕು. ಭಾಷೆಯ ಬಣ್ಣನೆಯನ್ನು ಮೀರಿದ ಅನುಭವವಾಗಿದೆ ಎನ್ನವುದು ಅಲ್ಲಮನ ಇಂಗಿತ. ದೇವರನ್ನು ಕುರಿತು ಹೇಳುವಲ್ಲಿ 'ಅಸೌ ಮೌನೇನ ಕೀರ್ತಿತಃ' ಎನ್ನುವುದು ಭಾಗವತ ಪುರಾಣ. ಅಂದರೆ ದೇವರು, ಮಾತಿನಿಂದಲ್ಲ ಮೌನದಿಂದ ಸ್ತುತಿಸಲ್ಪಡುವವನು ಎಂದು. ವಾಙ್ಮಯದ ಹರಿವನ್ನು ಸೂಚಿಸುವುದಕ್ಕಾಗಿ 'ಮಾತಿನ ಸಾತತ್ಯ' ಎಂಬ ಮಾತನ್ನು ಸಾಹಿತ್ಯಕಾರರು ಬಳಸುವರು. 'ಮೌನದ ಸಾತತ್ಯ' ಎಂದಲ್ಲ. ಸಾಹಿತ್ಯಕಾರರು ಲೌಕಿಕರು. ಅನುಭವಿಗಳಲ್ಲ. ಇದು ಲೌಕಿಕ ಸಾಹಿತ್ಯವನ್ನು ಟೀಕಿಸುವ ಮಾತಲ್ಲ. ಆದರೆ ಮಾತಿನ ಸಾತತ್ಯವೂ ಮೌನದ ಸಾತತ್ಯವೂ ಬೇರೆ ಬೇರೆಯಾಗಿ ಸಾಗುವ ಸಮಾಂತರ ಹಳಿಗಳಲ್ಲ. ಇವು ಒಂದರೊಡನೊಂದು ಬೆರೆಯುತ್ತವೆ. ಅಥವಾ ಬೆರೆತುಕೊಂಡೇ ಇವೆ.

ಮಾತು, ಮೂಕವಾಗುವ ಸನ್ನಿವೇಶ ಬದುಕಿನಲ್ಲಿ ಬಂದೇ ಬರುವುದು. ಆಗ, ಮಾತಿಗೆ ಮೌನದ ಪರಿಚಯವಾಗುವುದು. ತಾನು ಮೌನದ ಪರಿಚಯವನ್ನು ಮಾಡಿಕೊಂಡೆನೆಂದು ಮಾತು ಹೇಳುವುದೆಂತು? ಯಾವ ಮಾತಿನಲ್ಲಿ ಹೇಳುವುದು ಸಾಧ್ಯ? ಹೇಳಬೇಕೆನ್ನುವುದೇ ಮಾತಿನ ಗುಣ. ಆ ಗುಣವನ್ನೇ ಕಳೆದುಕೊಳ್ಳದೆ ಮೌನದ ಗುರುತಾಗುವುದು ಹೇಗೆ? ಈ ಅರ್ಥದಲ್ಲಿ, ತಾನು ಮೂಕವಾಗುವ ಸಂದರ್ಭವು ಮಾತಿಗೆ, ಆಶ್ಚರ್ಯಕಾರಿಯಾಗಿರುವಂತೆ ಆಘಾತಕಾರಿಯೂ ಆಗಿದೆ ಎನ್ನಬಹುದು. ಆದರೆ ಇದು ಆಘಾತಕಾರಿಯಲ್ಲ ಎಂದು ಸೂಚಿಸುವುದಕ್ಕಾಗಿಯೇ ಉಪನಿಷತ್ತು– ಇದೊಂದು 'ಒಲವಿನ ಸಂದರ್ಭ' ಎಂದು ಎತ್ತಿ ಹೇಳುವುದು. ಮೌನವು ಮಾತನ್ನು ಪ್ರೀತಿಸುವುದು! ಒಲವಿನಿಂದ ನೋಡುವುದು! ಈ ಒಲವಿನಿಂದಾಗಿಯೇ ತನ್ನ ಪರಿಚಯವನ್ನು ತಾನೇ ಮಾಡಿಕೊಡುವುದು. ತನ್ನ ಚಹರೆಗಳನ್ನೆಲ್ಲ ತೋರಿಸುವುದು. ಹೆಣ್ಣು– ಗಂಡಿಗೆ, ಗಂಡು–ಹೆಣ್ಣಿಗೆ ಒಲವಿನಲ್ಲಿ ತಮ್ಮನ್ನೇ ಒಪ್ಪಿಸಿಕೊಳ್ಳುವಂತೆ, ಮೌನವು ಮಾತಿಗೆ ತನ್ನನ್ನೇ ಒಪ್ಪಿಸುವುದು! ಒಲವಿನ ಸಂದರ್ಭದಲ್ಲಿ ವಿಪರ್ಯಾಸಗಳಿಲ್ಲ. ವಿರೋಧಾಭಾಸಗಳಿಲ್ಲ. ವಿಪರ್ಯಾಸಗಳೆಲ್ಲ ಲೀಲೆಗಳಾಗಿ ಮಾರ್ಪಡುವವು. **Enternity Is In Love With The Production Of Time**' ಎನ್ನುವನು ಕವಿ **Blake**. ನಮ್ಮ ಬಸವಣ್ಣನವರು 'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂದು ಅದ್ಭುತವಾಗಿ ಹೇಳುವರು. ಕೇಡಿಲ್ಲದ ಮೌನದ ಪರಿಚಯದಿಂದ ಮಾತಿಗೆ ದೊರಕುವ ಅಸೀಮ ಸ್ವಾತಂತ್ರ್ಯವನ್ನು ಹೇಳಿ ಶಬ್ದ ಸೂತಕವನ್ನೇ ಕಳೆಯುವರು!

■ **ತೋಷ**

## ಮಾತೇ ಮುತ್ತು

★ ಪ್ರೀತಿಯಿಂದ ಸ್ಫೂರ್ತಿ ಹೊಂದಿ ಜ್ಞಾನದಿಂದ ಮಾರ್ಗದರ್ಶನ ಹೊಂದುವುದೇ ಅತ್ಯುತ್ತಮ ಜೀವನ.

–ಬರ್ಟ್ರೆಂಡ್ ರಸೆಲ್

★ ನಿಮ್ಮ ಹೃದಯದಲ್ಲಿರುವ ಮಾಧುರ್ಯವನ್ನು ಮೊದಲು ಗುರುತಿಸಿ. ಬಳಿಕ ಎಲ್ಲರ ಹೃದಯದಲ್ಲೂ ನಿಮಗೆ ಮಾಧುರ್ಯವೇ ಗೋಚರಿಸುತ್ತದೆ.

–ರೂಮಿ

★ ಈ ಕ್ಷಣಕ್ಕಾಗಿ ಸಂತೋಷಪಡಿ. ಈ ಕ್ಷಣವೇ ನಿಮ್ಮ ಜೀವನ.

–ಉಮರ್ ಖಯ್ಯಾಮ್

★ ನಿಮ್ಮ ಜೀವಿತದ ಅವಧಿ ನಿಗದಿತವಾಗಿರುತ್ತದೆ. ಇನ್ನೊಬ್ಬರ ಬದುಕನ್ನು ಬದುಕಿ ಅದನ್ನು ವ್ಯರ್ಥಗೊಳಿಸಬೇಡಿ.

–ಸ್ಟೀವ್ ಜಾಬ್ಸ್

★ ದಿನನಿತ್ಯದ ಜೀವನದಲ್ಲಿ ನಮ್ಮ ಆತ್ಮಕ್ಕೆ ಮುತ್ತಿಕೊಂಡಿರುವ ದೂಳನ್ನು ಒರೆಸುವುದೇ ಕಲೆಯ ಕೆಲಸ.

–ಪಾಬ್ಲೊ ಪಿಕಾಸೊ

★ ಶಿಕ್ಷಣಕ್ಕೆ ಕೊನೆ ಎಂಬುದಿಲ್ಲ. ಶಿಕ್ಷಣ ಎಂದರೆ ಕೇವಲ ಪುಸ್ತಕ ಓದಿ ಪರೀಕ್ಷೆ ಪಾಸಾಗುವುದಲ್ಲ. ಶಿಕ್ಷಣವೆಂದರೆ ಹುಟ್ಟಿನಿಂದ ಹಿಡಿದು ಸಾಯುವವರೆಗೂ ನಿರಂತರ ಸಾಗುವ ಪ್ರಕ್ರಿಯೆ.

–ಜಿಡ್ಡು ಕೃಷ್ಣಮೂರ್ತಿ